**ದಿಃ 07-02-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಹಿಂದಿ (ಮರಾಠಿ) ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀಮತಿ ಎಸ್.ಎಸ್.ಜೆ. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಎದುರುದಾರರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.100/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ಅರ್ಜಿದಾರರು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.

**ಮುಖ್ಯ ವಿಚಾರಣೆ 1ನೇ ಅರ್ಜಿದಾರರು (Party in person) ಶ್ರೀ ರಘುವೀರ್ ಪ್ರಭಾಕರಲಾಲ್ ಕಲ್ವರ್ ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದು ಇರುತ್ತದೆ.

**ಎದುರುದಾರರ ಪರ ವಕೀಲರು ಗೈರು ಹಾಜರಿಯಾಗಿರುತ್ತಾರೆ. ಆದ ಕಾರಣ ಪ್ರಕರಣವನ್ನು ಕಾಯ್ದಿರಿಸಲಾಯಿತು.**

**ಸಾಕ್ಷಿಯನ್ನು ಪುನಹಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಎದುರುದಾರರ ಪರ ವಕೀಲರಾದ ಶ್ರೀ ಎಂ.ಎಂ.ಎಸ್. ರವರಿಂದಃ-**

ಈ ಪ್ರಕರಣದ ಬಗ್ಗೆ ನನಗೆ ಏನು ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ಯಾವ ಆಸ್ತಿಗೆ ಸಂಬಂಧಿಸಿದಂತೆ ವಿವಾದ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿನ ಆಸ್ತಿಗೆ ಸಂಬಂಧಿಸಿದ ಉತಾರು ಅಥವಾ ಇತರೆ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ. ಸದರಿ ಆಸ್ತಿಯು ಉತಾರುವಿನಲ್ಲಿ ಎಷ್ಟು ವಿಸ್ತೀರ್ಣ ನಮೂದು ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ವಿಸ್ತೀರ್ಣ ಅಂದಾಜು 350 ರಿಂದ 375 ಚದರ ಅಡಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಹೇಳಿದ್ದನ್ನು ವಕೀಲರು ಬರೆಯಿಸಿರುತ್ತಾರೆ. 1998 ರಿಂದ 2015 ರವರೆಗೆ ನಾನು ಮತ್ತು ನನ್ನ ತಂದೆ ರಿಯಲ್ ಎಸ್ಟೇಟ್ ಬ್ರೋಕರ್ ಆಗಿ ಕೆಲಸ ಮಾಡುತ್ತಿದ್ದೆವು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದು ಅದು ನೊಂದಾವಣಿ ಫರ್ಮ್ ಆಗಿತ್ತಾ ಎಂದರೆ ಸಾಕ್ಷಿಯು ಇಲ್ಲಾ ಎಂದು ನುಡಿಯುತ್ತಾರೆ. 1998 ರಿಂದ

2015 ರವರೆಗೆ ನಾನು ನನ್ನ ತಂದೆಯವರೊಂದಿಗೆ ಮಹಾರಾಷ್ಟ್ರದಲ್ಲಿ ಸತಾರಾ, ಪುಣೆ, ಮುಂಬೈ ಮತ್ತು ಕೊಲ್ಲಾಪುರ ದಲ್ಲಿ ಬ್ಯುಸಿನೆಸ್ ಮಾಡುತ್ತಿದ್ದೆ. ಆಗ ನಾನು 17-18 ವರ್ಷ ವಯಸ್ಸಿನವಾಗಿದ್ದೆ. ಆ ಸಮಯದಲ್ಲಿ ನಾನು ರಿಯಲ್ ಎಸ್ಟೇಟ್ ಬ್ಯುಸಿನೆಸ್ ಮಾಡುತ್ತಿದ್ದೆ ಎನ್ನುವುದಕ್ಕೆ ದಾಖಲೆ ಇಲ್ಲ.

**2.** ಫೆಬ್ರವರಿ 2000 ಇಸವಿಯಲ್ಲಿ ರಘುವೀರ್ ಕಲ್ವರ್ ರವರಿಗೆ ಸೇರಿದ ಶಾಪ್ ಖಾಲಿ ಆಗುವುದಿದೆ ಎಂದು ಯಾರು ನಿಮಗೆ ತಿಳಿಸಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಸಾಕಷ್ಟು ಜನ ಏಜೆಂಟ್‌ಗಳು ಗೊತ್ತಿದ್ದು ಕೊಲ್ಲಾಪುರದ ಏಜೆಂಟ್ ಅದನ್ನು ತಿಳಿಸಿರುತ್ತಾನೆ ಎಂದು ನುಡಿಯುತ್ತಾರೆ. 20 ವರ್ಷಗಳಾಗಿದ್ದು, ಆ ಏಜೆಂಟ್‌ನ ಹೆಸರು ನನಗೆ ಹೇಳಲು ಬರುವುದಿಲ್ಲ. ಏಜೆಂಟ್ ನು ರಘುವೀರ್ ಕಲ್ವರ್ ರವರ ಆಸ್ತಿಯು ಖಾಲಿ ಇರುವುದಾಗಿ ಹೇಳಿದ್ದು ಅದರ ಡೀಟೈಲ್ಸ್ ಕೊಟ್ಟಿಲ್ಲ, ಅವರ ಫೋನ್ ನಂಬರ್ ಕೊಟ್ಟಿದ್ದರು. ಸದರಿಯವರ ಆಸ್ತಿಯು ಖಾಲಿಯಾಗುವುದಿದೆ ಎಂದು ಹೇಳಿದ್ದರು, ಆ ಆಸ್ತಿಯ ಬಗ್ಗೆ ವ್ಯಾಜ್ಯ ಇದೆ ಎಂದು ಹೇಳಿಲ್ಲ. ಏಜೆಂಟ್‌ನು ಹೇಳಿದ ನಂತರ ಸದರಿ ಆಸ್ತಿಯಲ್ಲಿ ವ್ಯಾಜ್ಯ ಇರುವ ಬಗ್ಗೆ ನಾನು ವಿಚಾರಣೆ ಮಾಡಿಲ್ಲ, ಸಾಕ್ಷಿಯು ಮುಂದುವರೆದು ಆ ಆಸ್ತಿಯು ಖಾಲಿಯಾಗುವುದಿದೆ ಮತ್ತು ಬಾಡಿಗೆಗೆ ಕೊಡಬೇಕು ಎನ್ನುವದಷ್ಟೆ ನನಗೆ ಗೊತ್ತಿತ್ತು ಎಂದು ನುಡಿಯುತ್ತಾರೆ.

**3.** ನಾನು ರಘುವೀರ್ ಕಲ್ವರ್ ರವರನ್ನು ಜನವರಿ-ಮಾರ್ಚ್ 2000 ರಲ್ಲಿ ಮೊದಲ ಬಾರಿ ಭೇಟಿಯಾಗಿದ್ದೆ. ಸದರಿಯವರು ಎಲ್ಲಿ ಇರುತ್ತಾರೆ, ಅವರ ವಿಳಾಸ ನನಗೆ ಗೊತ್ತಿಲ್ಲ. ಮಾರ್ಚ್-ಏಪ್ರಿಲ್ 2000 ರಲ್ಲಿ ನನ್ನ ಪಕ್ಷಗಾರರು ಡಿಸ್ಕೌಂಟ್ ಸೇಲ್ ಬೆಳಗಾವಿಯಲ್ಲಿ ಎಲ್ಲೆಲ್ಲಿ ನಡೆಸಿದರು ಎಂದರೆ ಸಾಕ್ಷಿಯು ಸತಾರದಲ್ಲಿ ನನ್ನ ಪಕ್ಷಗಾರರು ಭೇಟಿಯಾಗಿದ್ದು ಬೆಳಗಾವಿಯಲ್ಲಿ ಸೇಲ್ ಮಾಡುವವರಿದ್ದರು ಎಂದು ನುಡಿಯುತ್ತಾರೆ. ಸತಾರದಲ್ಲಿ ಯಾವ ಮಾಲ್ಕಿ ಆಸ್ತಿಯನ್ನು ಮಾರಾಟ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಯಾರ ಮಾಲ್ಕಿ ಆಸ್ತಿ ಎಂದು ಗೊತ್ತಿಲ್ಲ, ರಸ್ತೆ ಬದಿಯ ಖಾಸಗಿ ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಬಾಂಬೆ ಬಜಾರ್ ಮತ್ತು ರಾಯಲ್ ರೆಡಿಮೇಡ್ ಕ್ಲಾತ್ ರವರು ಲಿಖಿತವಾಗಿ Authorization ಪತ್ರವನ್ನು ನನಗೆ ಕೊಟ್ಟಿಲ್ಲ. ರಾಯಲ್ ರೆಡಿಮೇಡ್ ಕ್ಲಾತ್ ಮತ್ತು ಬಾಂಬೆ ಬಜಾರ್ ಎನ್ನುವುದು ರಿಜಿಸ್ಟರ್ಡ್ ಕಂಪನಿಯೋ, registered proprietary concerned ಅಥವಾ partnership firm ಎಂದು ನನಗೆ ಗೊತ್ತಿಲ್ಲ. ರಾಯಲ್ ರೆಡಿಮೇಡ್ ಕ್ಲಾತ್ ಮತ್ತು ಬಾಂಬೆ ಬಜಾರ್ ಎರಡರ ನೊಂದಾಯಿತ ಕಛೇರಿ ಎಲ್ಲಿದೆ ಮತ್ತು ಅದರ Authorized ಪ್ರತಿನಿಧಿಗಳು ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ರಾಯಲ್ ರೆಡಿಮೇಡ್ ಕ್ಲಾತ್ ಮತ್ತು ಬಾಂಬೆ ಬಜಾರ್ ನವರು

ರಘುವೀರ್ ಕಲ್ವರ್ ರವರಿಗೆ ಭೇಟಿ ಮಾಡಿ ಅವರ ಆಸ್ತಿಯನ್ನು ಲೀಸ್ ಗೆ ಪಡೆದುಕೊಳ್ಳಿ ಎಂದು ಲಿಖಿತವಾಗಿ ಅಧಿಕಾರ ಪತ್ರವನ್ನು ಕೊಟ್ಟಿಲ್ಲ. ರಾಯಲ್ ಅಪೆರೆಲ್ಸ್ ಮತ್ತು ರಾಯಲ್ ರೆಡಿಮೇಡ್ ಕ್ಲಾತ್ ಹಾಗೂ ಬಾಂಬೆ ಬಜಾರ್ ಗೆ ಏನು ಸಂಬಂಧವಿಲ್ಲ. ರಾಯಲ್ ಅಪೆರೆಲ್ಸ್ ರಿಜಿಸ್ಟರ್ಡ್ ಕಂಪನಿಯೋ, registered proprietary concerned ಅಥವಾ partnership firm ಎನ್ನುವುದು ನನಗೆ ಗೊತ್ತಿಲ್ಲ.

**4.** ರಾಯಲ್ ಅಪೆರಲ್ಸ್ ನ ನೊಂದಾಯಿತ ಕಛೇರಿ ಎಲ್ಲಿದೆ ಮತ್ತು ಅದರ Authorized ಪ್ರತಿನಿಧಿಗಳು ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ರಾಯಲ್ ಅಪೆರೆಲ್ಸ್ ನವರು ರಘುವೀರ್ ಕಲ್ವರ್ ರವರ ಜೊತೆ ಅವರ ಆಸ್ತಿಯನ್ನು ಬಾಡಿಗೆಗೆ ಪಡೆದುಕೊಳ್ಳಲು ಲಿಖಿತವಾಗಿ ಅಧಿಕಾರ ಪತ್ರವನ್ನು ಕೊಟ್ಟಿಲ್ಲ, ಸಾಕ್ಷಿಯು ಮುಂದುವರೆದು ಮೌಖಿಕವಾಗಿ ಹೇಳಿದ್ದಾರೆ ಎಂದು ನುಡಿಯುತ್ತಾರೆ. ರಾಯಲ್ ಅಪೆರೆಲ್ಸ್ ನ ಪರವಾಗಿ ಮೌಖಿಕವಾಗಿ ಯಾರು ಹೇಳಿದ್ದರು ಎಂದು ಅವರ ಹೆಸರು ನನಗೆ ಗೊತ್ತಿಲ್ಲ, ಆದರೆ ಅವರು ಕ್ಯಾಷ್ ಕೌಂಟರ್ ನಲ್ಲಿ ಕುಳಿತುಕೊಳ್ಳುತಿದ್ದರು ಎಂದು ನುಡಿಯುತ್ತಾರೆ. ಸದರಿಯವರು ಯಾವ ಆಸ್ತಿಯ ಬ್ಯುಸಿನೆಸ್‌ಗೆ ಸಂಬಂಧಿಸಿದಂತೆ ಕ್ಯಾಷ್ ಕೌಂಟರ್ ನಲ್ಲಿ ಕುಳಿತುಕೊಳ್ಳುತಿದ್ದರು ಎಂದರೆ ಸಾಕ್ಷಿಯು ಪೆಂಡಾಲ್ ನಲ್ಲಿ ಕ್ಯಾಷ್ ಕೌಂಟರ್ ನಲ್ಲಿ ಕುಳಿತುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಜನವರಿ-ಮಾರ್ಚ್ 2000 ರ ಇಸವಿಯಲ್ಲಿ ಮೌಖಿಕವಾಗಿ ವ್ಯವಹಾರವನ್ನು ಮಾಡಲು ಅಧಿಕಾರವನ್ನು ಕೊಟ್ಟಿರುತ್ತಾರೆ.

**5.** ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ರಾಯಲ್ ಅಪೆರೆಲ್ಸ್ ನವರು ದಿನಕ್ಕೆ 1,700/-ರೂ ಬಾಡಿಗೆ ಕೊಡುವಾಗಿ ರಘುವೀರ್ ಕಲ್ವರ್ ರವರಿಗೆ ಆಫರ್ ಕೊಟ್ಟಿದ್ದರು ಎಂದು ಹೇಳಿದ್ದು ಅದನ್ನು ಲಿಖಿತವಾಗಿ ಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ಮೌಖಿಕವಾಗಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ಆಫರ್ ನ್ನು ರಾಯಲ್ ಅಪೆರೆಲ್ಸ್ ನವರು ನನಗೆ ಕೊಟ್ಟಿದ್ದರು, ನಾನು ಸದರಿ ಆಫರ್ ನ್ನು ರಘುವೀರ್ ಕಲ್ವರ್ ರವರಿಗೆ ಕೊಟ್ಟಿರುತ್ತೇನೆ. ರಾಯಲ್ ಅಪೆರೆಲ್ಸ್‌ನ Authorized ಪ್ರತಿನಿಧಿಗಳು ಮತ್ತು ಕ್ಯಾಷ್ ಕೌಂಟರ್ ನಲ್ಲಿ ಕುಳಿತುಕೊಂಡಿದ್ದ ವ್ಯಕ್ತಿ ಸದರಿ ಆಫರ್ ನ್ನು ಕೊಡುವುದಕ್ಕಿಂತ ಮುಂಚೆ ಆಸ್ತಿಯನ್ನು ಪರಿಶೀಲನೆ ಮಾಡಿ ಹೋಗಿದ್ದರು. ಆ ರೀತಿ ಪರಿಶೀಲನೆ ಮಾಡಲು ಫೆಬ್ರವರಿ-ಮಾರ್ಚ್ 2000 ರ ಇಸವಿಯಲ್ಲಿ ಒಬ್ಬನೇ ವ್ಯಕ್ತಿ ಬಯ್ಯಾ ಸಾಬ್ ಬಂದಿದ್ದ. ಆತನ ಹೆಸರು ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆಗ ನನಗೆ 19 ವರ್ಷ ವಯಸ್ಸಿತ್ತು, ವ್ಯವಹಾರ ಜ್ಞಾನ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಬಯ್ಯಾ ಸಾಬ್ ಬಂದಿದ್ದ ಎನ್ನುವುದಕ್ಕೆ ದಾಖಲೆ ನಿರ್ವಹಣೆ ಮಾಡಿಲ್ಲ. ಬಾಂಬೆ ಬಜಾರ್ ನವರು ತಿಂಗಳಿಗೆ 50,000/-ರೂ

ಬಾಡಿಗೆ ಕೊಡುವುದಾಗಿ ಆಫರ್ ನ್ನು ಮಾಡಿರುತ್ತಾರೆ ಎಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿದ್ದು ಆ ರೀತಿ ಆಫರ್ ನ್ನು ನಾನು ಕೊಟ್ಟಿದ್ದೆ. ಆ ರೀತಿ ಆಫರ್ ನ್ನು ಲಿಖಿತವಾಗಿ ಕೊಟ್ಟಿಲ್ಲ. ಸದರಿ ಆಫರ್ ನ್ನು ಕೊಡುವುದಕ್ಕಿಂತ ಮುಂಚೆ ಬಾಂಬೆ ಬಜಾರ್ ನವರ ಪರವಾಗಿ ಆಸ್ತಿಯನ್ನು ನೋಡಿ ಪರಿಶೀಲನೆ ಮಾಡಲು ನನ್ನ ಜೊತೆಯೇ ಬಂದಿದ್ದರು. ಬಾಂಬೆ ಬಜಾರ್ ನವರ ಪರವಾಗಿ ಫೆಬ್ರವರಿ-ಮಾರ್ಚ್ 2000 ರ ಇಸವಿಯಲ್ಲಿ ಬಂದಿದ್ದರು, ಯಾರು ಬಂದಿದ್ದರು ಎಂದು ಅವರ ಹೆಸರು ನನಗೆ ನೆನಪಿಲ್ಲ. ಬಾಂಬೆ ಬಜಾರ್, ರಾಯಲ್ ಅಪೆರಲ್ಸ ಮತ್ತು ರಾಯಲ್ ರೆಡಿಮೇಡ್ ಕ್ಲಾತ್ ನವರು ಈ ಮೇಲೆ ಹೇಳಿದ ರೀತಿಯಲ್ಲಿ ಆಫರ್ ನ್ನು ಕೊಟ್ಟಿದ್ದರು, ನಾನು ಅವರನ್ನು ಕರೆದುಕೊಂಡು ಬಂದಿದ್ದೆ, ರಘುವೀರ್ ಕಲ್ಪರ್ ರವರಿಗೆ ಆಫರ್ ನ್ನು ಕೊಟ್ಟಿದ್ದೆ ಎಂದು ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

**6.** ನಾನು ಎರಡನೇ ಸಲ ಬೆಳಗಾವಿಗೆ 2011 ರಲ್ಲಿ ಬಂದಿರುತ್ತೇನೆ. ಜನವರಿ ತಿಂಗಳು ಇರಬಹುದು. ಆಗ ಬಾಂಬೆ ಬಜಾರ್ ನ Authorized ಪ್ರತಿನಿಧಿಗಳು ಈ ಹಿಂದೆ ಇದ್ದಂತಹ ವ್ಯಕ್ತಿಯೇ ಇದ್ದರು. ಎರಡನೇ ಸಲ 2,000/- ರೂ ಬಾಡಿಗೆಗೆ ಆಫರ್ ನ್ನು ಕೊಟ್ಟಿರುವ ಬಗ್ಗೆ ಲಿಖಿತವಾಗಿ ಆಗಿಲ್ಲ. ಆಸ್ತಿಯು ಯಾವ ತರಹದ ಕಟ್ಟಡ ಇತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸ್ವಸ್ತಿಕ್ ಫುಟ್ವೇರ್ ಶಾಪ್ ಎನ್ನುವುದು ಗೊತ್ತು ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಪಕ್ಕದಲ್ಲಿ ಯಾವ ಹೆಸರಿನ ಅಂಗಡಿ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವಸ್ತಿಕ್ ಫುಟ್ವೇರ್ ಅಂಗಡಿಯ ಮುಂದೆ ಇಮಿಟೇಷನ್ ಜ್ಯೂವೆಲರಿ ಅಂಗಡಿ ಇತ್ತು, ಅದರ ಹೆಸರು ಗೊತ್ತಿಲ್ಲ. ಸ್ವಸ್ತಿಕ್ ಫುಟ್ವೇರ್ ಅಂಗಡಿಯಲ್ಲಿ ಯಾವ ಯಾವ ಎಮ್ಯುನಿಟೀಸ್ ಇತ್ತು ಎಂದು ನನಗೆ ಗೊತ್ತಿಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ರಘುವೀರ್ ಕಲ್ಪರ್ ರವರಿಗೆ ಅನುಕೂಲವಾಗಲಿ ಎಂದು ಆಸ್ತಿಯ ಬಗ್ಗೆ ಏನು ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**